# ದಿನಾಂಕ: 24/12/2021 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-139 ಎಸ್.ಕೆ.ಆರ್ ಮಾರುಕಟ್ಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು: | | |
|---|---|---|
| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ |
| 1 | ಶ್ರೀ.ಎಸ್.ಎಲ್.ಪಾಪರೆಡ್ಡಿ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ |
| 2 | ಶ್ರೀ. ಎಂ. ಅರುಣ್‌ಕುಮಾರ್ | ಸಂಚಾಲಕರು ಮತ್ತು ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ-139 |
| 3 | ಶ್ರೀ. ಉಮೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ. ವಜೀರ್ | ಮೌಲ್ಯ ಮಾಪಕರು, ವಾರ್ಡ್-139 |
| 5 | ಶ್ರೀ. ಎಂ. ವೆಂಕಟೇಶ್ | ಹೆಡ್ ಗ್ಯಾಂಗ್‌ಮೆನ್, ವಾರ್ಡ್-139 |
| 6 | ಶ್ರೀ. ಎಂ. ಶಂಕರ್ | ಸ್ಯಾನಿಟರಿ ದಫೇದಾರ್, ವಾರ್ಡ್-139 |
| 7 | ಶ್ರೀ. ಡೋಲಾರಾಮ್ | ಸದಸ್ಯರು |
| 8 | ಶ್ರೀ. ಅಕ್ಮಾಲ್ | ಸ್ಥಳೀಯ ನಾಗರೀಕರು |
| 9 | ಶ್ರೀ. ಮಾರಪ್ಪ | ಸ್ಥಳೀಯ ನಾಗರೀಕರು |
| 10 | ಶ್ರೀ.ಎನ್ ಪ್ರಸಾದ್ | ಸ್ಥಳೀಯ ನಾಗರೀಕರು |
| 11 | ಶ್ರೀ. ಕೆ.ಜಿ.ಶ್ರೀನಿವಾಸ್ | ಸ್ಥಳೀಯ ನಾಗರೀಕರು |
| 12 | ಶ್ರೀ. ಕೆ. ವೆಂಕಟೇಶ್ | ಸ್ಥಳೀಯ ನಾಗರೀಕರು |
| 13 | ಶ್ರೀ. ಮಂನ್ಸೂರ್ ಖಾನ್ | ಸ್ಥಳೀಯ ನಾಗರೀಕರು |
| 14 | ಶ್ರೀ. ಜಾಫರ್ | ಸ್ಥಳೀಯ ನಾಗರೀಕರು |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.

2. **ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಚರ್ಚಿಸಿದ ವಿಷಯಗಳು:**

| ಕ್ರ.ಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ಪೌರಕಾರ್ಮಿಕರು 1ವರ್ಷ ಒಳಗೆ ಕಾರ್ಯನಿರ್ವಹಿಸುತ್ತಿದ್ದವರನ್ನು ಈ ಹಿಂದೆ ರದ್ದುಪಡಿಸಿರುವುದರಿಂದ ಕಸದ ಸಮಸ್ಯೆ ಉಂಟಾಗಿರುತ್ತದೆ. ಆದ್ದರಿಂದ ಸದರಿ ಪೌರಕಾರ್ಮಿಕರನ್ನು ಶೀಘ್ರದಲ್ಲಿ ಮರು ನೇಮಕ ಮಾಡಿಕೊಂಡು ಕಸಮುಕ್ತಗೊಳಿಸಿ ಕಾರ್ಯನಿರ್ವಹಿಸಲು ಶ್ರೀ. ಪ್ರಸಾದ್ ಹಾಗೂ ಶ್ರೀ. ಶ್ರೀನಿವಾಸ್ ರವರು ಮನವಿ ಮಾಡಿದರು. | ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮರು ನೇಮಕಾತಿ ಮಾಡುವ ವಿಷಯವು ಯಾವ ಹಂತದಲ್ಲಿದೆ ಎಂಬುದರ ವಿವರ ನೀಡುವಂತೆ ಸೂಚನೆ ನೀಡಲಾಯಿತು | ಕಿರಿಯ ಆರೋಗ್ಯ ಪರಿವೀಕ್ಷಕರು, ಮುಖ್ಯ ಆರೋಗ್ಯ ವೈದ್ಯಾಧಿಕಾರಿಗಳು, ಬಿಬಿಎಂಪಿ |

ಪ.ತಿ.ನೋ

| | | | |
|---|---|---|---|
| 2 | ಆರೋಗ್ಯ ಇಲಾಖೆ, ಬಿಬಿಎಂಪಿ ರವರಿಗೆ ಕಛೇರಿ ಅಭಾವವಿರುವ ಕಾರಣ ಪಿವಿಆರ್ ರಸ್ತೆಯ ಪಾಲಿಕೆ ಕಟ್ಟಡ (Mustring center) ನ್ನು ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿರುವ ಕಾರಣ ಕೂಡಲೆ ಆರೋಗ್ಯ ಇಲಾಖೆ, ಬಿಬಿಎಂಪಿ ರವರಿಗೆ ಹಸ್ತಾಂತರಿಸಲು ಶ್ರೀ. ಪ್ರಸಾದ್ ರವರು ಮನವಿ ಮಾಡಿದರು. | ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಕಟ್ಟಡ ಕಾಮಗಾರಿಯು ಪೂರ್ಣಗೊಂಡಿದ್ದಲ್ಲಿ ವಿವರದೊಂದಿಗೆ ಜಂಟಿ ಆಯುಕ್ತರು (ಪಶ್ಚಿಮ) ರವರ ಅನುಮತಿ ಪಡೆದು ಹಸ್ತಾಂತರಿಸಲು ಸೂಚನೆ ನೀಡಿದರು. | ಕಿರಿಯ ಅಭಿಯಂತರರು, ವಾರ್ಡ್–139, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ |
| 3 | ಕಂದಾಯ ಇಲಾಖೆ ರವರು ನಿಗಧಿತ ಸಮಯದಲ್ಲಿ ಕಛೇರಿಯಲ್ಲಿ ಲಭ್ಯವಿಲ್ಲದಿರುವುದಾಗಿ ಶ್ರೀ. ಪ್ರಸಾದ್ ಹಾಗೂ ಶ್ರೀ. ಶ್ರೀನಿವಾಸ್ ರವರು ವಿಷಯ ಪ್ರಸ್ತಾಪಿಸಲಾಯಿತು. | ಕಂದಾಯ ಪರಿವೀಕ್ಷಕರು ರವರಿಗೆ ನಿಗಧಿತ ಕಛೇರಿ ಸಮಯದಲ್ಲಿ ಕಾರ್ಯನಿರ್ವಹಿಸಲು ಕಂದಾಯ ವಸೂಲಿಗಾರರಿಗೆ ಆದೇಶಿಸುವಂತೆ ಹಾಗೂ ವಿವರಣೆ ನೀಡಲು ಸೂಚನೆ ನೀಡಲಾಯಿತು. | ಕಂದಾಯ ಪರಿವೀಕ್ಷಕರು, ಸಹಾಯಕ ಕಂದಾಯ ಅಧಿಕಾರಿಗಳು |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಕಿರಿಯ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ

<u>ಪ್ರತಿಯನ್ನು:–</u>

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ: 139 ಎಸ್.ಕೆ.ಆರ್ ಮಾರುಕಟ್ಟೆ ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪಶ್ಚಿಮ ವಿಭಾಗ, ಬಿಬಿಎಂಪಿ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BWSSB) ಎಸ್.ಕೆ.ಆರ್ ಮಾರುಕಟ್ಟೆ ವ್ಯಾಪ್ತಿಯ ರವರಿಗೆ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BESCOM) ಎಸ್.ಕೆ.ಆರ್ ಮಾರುಕಟ್ಟೆ ವ್ಯಾಪ್ತಿಯ ರವರಿಗೆ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿ.
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೃಹತ್ ರಾಜಕಾಲುವೆ (SWD) ಪಶ್ಚಿಮ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11. ಆರೋಗ್ಯ ವೈದ್ಯಾಧಿಕಾರಿ, ಎಸ್.ಕೆ.ಆರ್ ಮಾರುಕಟ್ಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಚಾಮರಾಜಪೇಟೆ ವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹ ಕಂದಾಯ ಅಧಿಕಾರಿ, ಚಾಮರಾಜಪೇಟೆ ಉಪವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ, ಚಾಮರಾಜಪೇಟೆ/ಎಸ್.ಕೆ.ಆರ್.ಮಾರುಕಟ್ಟೆ /ಸೆಂಟ್ರಲ್ ಪೊಲೀಸ್ ಠಾಣೆ, ಬೆಂಗಳೂರು ರವರ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
15. ಆರಕ್ಷಕ ನಿರೀಕ್ಷಕರು, ಎಸ್.ಕೆ.ಆರ್ ಮಾರುಕಟ್ಟೆ / ಚಾಮರಾಜಪೇಟೆ ಸಂಚಾರಿ ವಿಭಾಗ, ಬೆಂಗಳೂರು ರವರ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
16. ವಾರ್ಡ್ ಸಂಖ್ಯೆ: 139 ಎಸ್.ಕೆ.ಆರ್ ಮಾರುಕಟ್ಟೆ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.